ಸಂಪುಟ : 40 ಸಂಚಿಕೆ 136 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 12 ಜೂನ್ 2017 ಸೋಮವಾರ POST REG NO . L-2/RNP- 364/TMR/2015-17 ಪುಟಗಳು : 08 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com

ಕರ್ನಾಟಕ ಮಹಿಳಾ ವಿವಿಗೆ ಅಕ್ಕಮಹಾದೇವಿ ಮಹಿಳಾ ವಿವಿ ಎಂದು ಪುನರ್ ನಾಮಕರಣ

ಜಿಎಸ್‌ಟಿ ಮಹತ್ವದ ಸಭೆ : 66 ವಸ್ತುಗಳ ಮೇಲೆ ತೆರಿಗೆ ಕಡಿತ

ವಿವರ : ಪುಟ 8

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಇಂದು ಮಧ್ಯಾಹ್ನ 3ಕ್ಕೆ ಶ್ರೀಲಂಕಾ-ಪಾಕಿಸ್ತಾನ ನಡುವೆ ಪಂದ್ಯ

₹55 Discount Per Gram
Gold 916 ₹ 2735/-
Silver ₹ 40600/-
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

ಮಹಿಳಾ ವಿವಿಗೆ ಅಕ್ಕಮಹಾದೇವಿ ಹೆಸರು

ಬೆಂಗಳೂರು

ವಿಜಯಪುರದಲ್ಲಿನ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿದ್ಯುಕ್ತವಾಗಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಎಂದು ಪುನರ್ ನಾಮಕರಣ ಮಾಡಿದರು.

ನಂತರ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕ ಇತಿಹಾಸದಲ್ಲಿ ಇಂದಿನ ದಿನ ಅವಿಸ್ಮರಣೀಯವಾಗಿದೆ. ದೇಶದ 7 ಮಹಿಳಾ ವಿಶ್ವವಿದ್ಯಾಲಯಗಳ ಪೈಕಿ ಕರ್ನಾಟಕದಲ್ಲಿ ಇರುವುದು ಇದೊಂದೆ ಮಹಿಳಾ ವಿಶ್ವವಿದ್ಯಾಲಯ, ಈ ವಿಶ್ವವಿದ್ಯಾಲಯಕ್ಕೆ ರಾಜ್ಯದ 30 ಜಿಲ್ಲೆಗಳು ಒಳಪಟ್ಟಿವೆ ಎಂದು ಹೇಳಿದರು.

ಸಮಾಜದಲ್ಲಿ ಸಮಾನತೆ ಕಾಣಬೇಕೆಂದರೆ ಮಹಿಳೆಯರ ಶಿಕ್ಷಣ ಅತ್ಯಗತ್ಯವಾಗಿದೆ, ರಾಜ್ಯ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ 25 ಸಾವಿರ ಕೋಟಿ ರೂಪಾಯಿ ಮೀಸಲಿಡಲಾಗಿದೆ. ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ಹೆಚ್ಚಿಸುವುದು ಸರ್ಕಾರದ ಉದ್ದೇಶವಾಗಿದೆ ಎಂದು ಅವರು ತಿಳಿಸಿದರು.

ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣ ನೀಡುವ ಪ್ರಸ್ತಾವನೆ ಇದ್ದು, ಶೀಘ್ರದಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ರೈತರ ಕೃಷಿ ಸಾಲ ಮನ್ನಾ ಮಾಡಲು ತಮ್ಮ ವಿರೋಧವಿಲ್ಲ, ಆದರೆ ಕೇಂದ್ರ ಸರ್ಕಾರ ಅರ್ಧ ಸಾಲ ಮನ್ನಾ ಮಾಡಿದರೆ, ರಾಜ್ಯ ಸರ್ಕಾರವು ಸಾಲ ಮನ್ನಾ ಬಗ್ಗೆ ಯೋಚಿಸಬಹುದಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದರು. ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಗಣ್ಯ ಮಹಿಳೆಯರಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ರಾಮಕೃಷ್ಣ ಆಶ್ರಮದ ರಜತ ಸಂಜಾತ ಕಾರ್ಯಕ್ರಮದಲ್ಲಿ ಮಾತಾಜಿ ಯೋಗಾನಂದಮಯೀ ವ್ಯಾಖ್ಯಾನ

ಸತ್ಯಪಥದಲ್ಲಿರುವವರಿಗೆ ಗೆಲುವು ನಿಶ್ಚಿತ

ತುಮಕೂರು

ಸತ್ಯಪಥದಲ್ಲಿರುವವರಿಗೆ ಗೆಲುವು ಕಟ್ಟಿಟ್ಟ ಬುತ್ತಿ. ಶುದ್ಧದೃಷ್ಟಿ, ಜ್ಞಾನದೃಷ್ಟಿ, ವಿವೇಕದೃಷ್ಟಿ, ಅಲೌಕಿಕದೃಷ್ಟಿ ಇರುವವರಿಗೆ ಸರ್ವಭೂತ, ಸರ್ವಜನ ಹಿತದೃಷ್ಟಿ ಇರುತ್ತದೆ. ಶ್ರೀಮಾತೆ ಶ್ರೀಶಾರದಾದೇವಿಯವರ ಜೀವನದ ಪ್ರತಿಯೊಂದು ಘಟನೆಯೂ, ಪ್ರತಿಯೊಂದು ಮಾತೂ ಒಂದು ಬೆಳಕಿನ ದಿಕ್ಸೂಚಿ. ಆಡಂಬರವಿಲ್ಲದೆಯೇ ಸದ್ದಿಲ್ಲದೆಯೇ ಅಲೌಕಿಕತೆಯನ್ನು ಪಸರಿಸಿದವರು ಶ್ರೀಮಾತೆ. ಅವರು ಪುಣ್ಯಘನ, ಪವಿತ್ರಘನ, ಚಿದ್ಘನಸ್ವರೂಪರು, ಎಂದು ದಾವಣಗೆರೆ ಸಾಧನಾಶ್ರಮದ ಪೂಜ್ಯ ಮಾತಾಜಿ ಯೋಗಾನಂದ ಮಯೀರವರು ಅಭಿಪ್ರಾಯಪಟ್ಟರು.

ಅವರು ನಗರದ ರಾಮಕೃಷ್ಣ-ವಿವೇಕಾನಂದ ಆಶ್ರಮದ ಬೆಳ್ಳಿ ಹಬ್ಬ ರಜತಯಾನದ ಅಂಗವಾಗಿ ಮಾತೆಯರಿಗಾಗಿ ಆಯೋಜಿಸಲಾಗಿದ್ದ ರಜತ ಸಂಜಾತ ಎಂಬ ವಿಶೇಷ ಕಾರ್ಯಾಗಾರವನ್ನು ಉದ್ಘಾಟಿಸಿ ಲೌಕಿಕದಲ್ಲೂ ಅಲೌಕಿಕತೆ - ಅದುವೇ ಶ್ರೀಮಾತೆ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಶಾರೀರಿಕ ಮಾನಸಿಕ ವ್ಯವಹಾರಗಳು ಲೌಕಿಕ ಎನಿಸಿದರೆ, ಬೆಳಕು, ಜ್ಞಾನ ಎಂಬುದು ಅಲೌಕಿಕ. ಶ್ರೀಮಾತೆಯವರ ಜೀವನವನ್ನು ಒಳಹೊಕ್ಕು ನೋಡಿದಾಗ ಅಲ್ಲಿ ಪ್ರತಿಯೊಂದು ಘಟನೆಯಲ್ಲಿಯೂ ಮಾರ್ಗದರ್ಶಕ ವಿಚಾರವಿದೆ. ಕೋಟಿಕೋಟಿ ಕೋಟಲೆಗಳ ಮಧ್ಯೆ ಪುಣ್ಯಕೋಟಿ ಶ್ರೀಮಾತೆ. ಪಾವಿತ್ರ್ಯತೆಯೇ ಮೂರ್ತಿವೆತ್ತಂದಿದ್ದ ಶ್ರೀಮಾತೆಯವರದು ಬಹುಮುಖಿ, ಅಂತರ್ಮುಖಿ, ಅಲೌಕಿಕ ವ್ಯಕ್ತಿತ್ವ ಎಂದು ನುಡಿದರು. ಬೆಂಗಳೂರಿನ ಶ್ರೀ ಭವತಾರಿಣಿ ಆಶ್ರಮದ ಪೂಜ್ಯ ಮಾತಾಜಿ ವಿವೇಕಮಯೀರವರು, ಕೌಟುಂಬಿಕ ಸ್ವಾಸ್ಥ್ಯ - ಮಾತೆ ಹೇಳಿದ ಪಥ್ಯ ಎಂಬ ವಿಷಯವಾಗಿ ಮಾತನಾಡುತ್ತಾ, ಸ್ತ್ರೀ ತನ್ನ ಸ್ವಾರ್ಥದ ಸೀಮಿತ ಪರಿಧಿಯನ್ನು ದಾಟಿದಾಗ ಸರ್ವರೂತನ್ನವರೆಂಬ ಭಾವ ಉದ್ಭೋದನಗೊಂಡು ಉನ್ನತವಾದ ಮಾತೃತ್ವಭಾವ ಅವಳನ್ನು ಆವರಿಸಿಕೊಳ್ಳುತ್ತದೆ ಎಂಬ ಶ್ರೀಮಾತೆಯವರ ಮಾತನ್ನು ಉದ್ಧರಿಸುತ್ತಾ ಮಾತೃತ್ವದ ಮಹಿಮೆಯನ್ನು >>> 4ನೇ ಪುಟಕ್ಕೆ

ನಗರದ ರಾಮಕೃಷ್ಣ - ವಿವೇಕಾನಂದ ಆಶ್ರಮದಲ್ಲಿ ಆಯೋಜಿಸಲಾಗಿದ್ದ ರಜತ ಸಂಜಾತ ಎಂಬ ವಿಶೇಷ ಕಾರ್ಯಾಗಾರವನ್ನು ದಾವಣಗೆರೆ ಸಾಧನಾಶ್ರಮದ ಪೂಜ್ಯ ಮಾತಾಜಿಯೋಗಾನಂದಮಯೀರವರು ಉದ್ಘಾಟಿಸಿದರು. ಚಿತ್ರದಲ್ಲಿ ಮಾತಾ ಪ್ರಬೋಧಮಯಿ, ಮಾತಾತ್ಯಾಗಮಯಿ, ಮಾತಾ ವಿವೇಕಮಯಿ ಸ್ವಾಮಿನಿ ಅಪರೋಕ್ಷಾನಂದ ಸರಸ್ವತೀ, ಮಾತಾ ಅಮೋಘಮಯಿ, ಮಾತಾ ಶಿವಮಯಿ, ಮಾತಾ ಬ್ರಹ್ಮಮಯಿ, ಮಾತಾಚೈತನ್ಯಮಯಿ, ಡಾ. ಆರ್. ಆನಂದಕುಮಾರಿ ಹಾಗೂ ಸುಜಾತಾ ನಂಜೇಗೌಡರವರನ್ನು ಕಾಣಬಹುದು.

> ಇಂದು ಕೌಟುಂಬಿಕ ವ್ಯವಸ್ಥೆ ಹದಗೆಡುತ್ತಿರುವುದಕ್ಕೆ ಕಾರಣ, ಪಾಶ್ಚಾತ್ಯ ವಿಚಾರಧಾರೆಯ ಅಂಧಾನುಕರಣೆ, ಮಕ್ಕಳಿಗೆ ಸನಾತನ ಮೌಲ್ಯಯುತ ವಿಚಾರಗಳನ್ನು ತಿಳಿಸಿದರೆ ಮಕ್ಕಳು ತಮ್ಮಿಂದ ವಿಮುಖರಾಗಿಬಿಡುವರೆಂಬ ವಿನಾಕಾರನ ಭಯ, ಸ್ವಾರ್ಥಪೂರಿತ ಸಂಕುಚಿತಭಾವ! ಈ ಎಲ್ಲಾ ಕಾರಣಗಳಿಂದ ಹದಗೆಡುತ್ತಿರುವ ಕೌಟುಂಬಿಕ ಸ್ವಾಸ್ಥ್ಯ ವನ್ನು ಕಾಪಾಡುವ ಜವಾಬ್ದಾರಿ, ಹೊಣೆಗಾರಿಕೆ ತಾಯಂದಿರ ಮೇಲಿದೆ

ದಕ್ಷಿಣ ಕನ್ನಡದಲ್ಲಿ ಭಾರೀ ಮಳೆ

ಬೆಂಗಳೂರು

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ವ್ಯಾಪಕವಾಗಿ ಮಳೆ ಸುರಿಯುತ್ತಿದೆ. ಜಿಲ್ಲೆಯ ಪ್ರಮುಖ ನದಿಗಳಾದ ನೇತ್ರಾವತಿ ಮತ್ತು ಕುಮಾರಧಾರಾ ನದಿಗಳ ಒಳ ಹರಿವು ಹೆಚ್ಚುತ್ತಿದೆ.

ಮಂಗಳೂರು ತಾಲ್ಲೂಕಿನ ಹರೇಕಳದಲ್ಲಿ ಮರ ಉರುಳಿ ಬಿದ್ದು ವಾಹನ ಸಂಚಾರಕ್ಕೆ ಅಡಚಣೆಯಾಗಿದೆ. ಕುತ್ತಾರಿನಲ್ಲಿ ತಡೆಗೋಡೆ ಉರುಳಿದೆ. ಉಳ್ಳಾಲದಲ್ಲಿ ಕಡಲ್ಕೊರೆತ ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಮಂಗಳೂರಿನಲ್ಲಿ ಮಳೆಯಿಂದಾಗಿ ಚರಂಡಿಗಳು ತುಂಬಿ ರಸ್ತೆಗಳಲ್ಲಿ ನೀರು ಹರಿಯುತ್ತಿದ್ದು, ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಿರುಗಾಳಿ ಸಹಿತ ಮಳೆ ಬೀಳುತ್ತಿದೆ.

ಭಾರಿ ಮಳೆಯಿಂದಾಗಿ ಉಡುಪಿ ಜಿಲ್ಲೆ ಬೈಂದೂರು ಬಳಿ ಸಂಭವಿಸಿದ ಭೂ ಕುಸಿತದಿಂದ ಮಂಗಳೂರು-ಮುಂಬೈ ನಡುವಿನ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ವಾಹನಗಳ ಸಂಚಾರಕ್ಕೆ ತೀವ್ರ ಅಡ್ಡಿಯಾಗಿದೆ.

ನೈರುತ್ಯ ಮುಂಗಾರು ದಕ್ಷಿಣ ಒಳನಾಡಿನ ಎಲ್ಲೆಡೆ ಪ್ರವೇಶಿಸಿದೆ. ಉತ್ತರ ಒಳನಾಡಿನ ಹಲವು ಭಾಗಗಳಲ್ಲೂ ಮುಂಗಾರು ಪ್ರವೇಶವಾಗಿದೆ. ಮುಂದಿನ ಎರಡು-ಮೂರು ದಿನಗಳಲ್ಲಿ ಉತ್ತರ ಒಳನಾಡಿನ ಇನ್ನು ಹೆಚ್ಚಿನ ಪ್ರದೇಶಗಳಿಗೆ ಮುಂಗಾರು ವ್ಯಾಪಿಸಲಿದೆ.

ದಕ್ಷಿಣ ಒಳನಾಡಿನಲ್ಲಿ ಮುಂಗಾರು ತೀವ್ರಗೊಂಡಿದ್ದು, ಕರಾವಳಿಯಲ್ಲಿ ಚುರುಕಾಗಿದೆ. ಉತ್ತರ ಒಳನಾಡಿನ ಹಲವೆಡೆ ಮಳೆಯಾಗಿದೆ. ಶಿರಾಳಿಯಲ್ಲಿ ಅತ್ಯಧಿಕ 27 ಸೆಂಟಿಮೀಟರ್ ಮಳೆ ಬಿದ್ದಿದೆ. ಉಳಿದಂತೆ ಆಗುಂಬೆ 23, ಹೊಸನಗರ, ಕುಂದಾಪುರ 18, ಕೋಟಾ, ಕೊಲ್ಲೂರು, ಉಡುಪಿ ಜಿಲ್ಲೆ ಸಿದ್ದಾಪುರದಲ್ಲಿ 16, ಮಂಗಳೂರು ವಿಮಾನ ನಿಲ್ದಾಣ, ಕುಮಟ 15, ಮೂಡುಬಿದರೆ, ಕಾರ್ಕಳ, ಹೊನ್ನಾವರ 14, ಗೇರುಸೊಪ್ಪದಲ್ಲಿ 13 ಸೆಂಟಿಮೀಟರ್ ಮಳೆಯಾಗಿದೆ.

ಮುನ್ಸೂಚನೆಯಂತೆ ಕರಾವಳಿಯ ಎಲ್ಲಾ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಬಹುತೇಕ, ಉತ್ತರ ಒಳನಾಡಿನ ಹಲವೆಡೆ ಮಳೆ ಬೀಳಲಿದೆ. ಸಮುದ್ರ ಮೇಲ್ಮೈಗಾಳಿ ಪಶ್ಚಿಮಾಭಿಮುಖವಾಗಿ ಗಂಟೆಗೆ 45 ರಿಂದ 55 ಕಿಲೋಮೀಟರ್ ರಭಸದಲ್ಲಿ ಬೀಸಲಿದೆ. ಬೆಂಗಳೂರು ಹಾಗೂ ಸುತ್ತಮುತ್ತ ಸಾಮಾನ್ಯವಾಗಿ ಮೋಡಕವಿದ ವಾತಾವರಣ, ಒಂದೆರಡು ಬಾರಿ ಮಳೆ ನಿರೀಕ್ಷಿತ. ಮೇಲ್ಮೈಗಾಳಿ ಬಲವಾಗಿ ಬೀಸಲಿದೆ.

ಜಾತಿಯತೆ ಬಿಟ್ಟು ಸ್ವಾಮಿಗಳು ಹೊರಬರಲಿ

ಬಸವ ದರ್ಶನ ಮಹಾಕಾವ್ಯ ವಿಚಾರ ಸಂಕಿರಣದಲ್ಲಿ ಡಾ.ಬಸವರಾಜ ಸಾದರ ಅಭಿಮತ

ತುಮಕೂರು

ಯಾವುದೇ ಜಾತಿ, ಧರ್ಮವಿರಲಿ ಅದನ್ನೆಲ್ಲ ಬದಿಗಿಟ್ಟು ಎಲ್ಲ ಸ್ವಾಮೀಜಿಗಳು ಭ್ರಷ್ಟಾಚಾರ, ಅನಾಚಾರಗಳ ವಿರುದ್ಧ ಧ್ವನಿ ಎತ್ತಿದರೆ ಈ ದೇಶವನ್ನು ಖಂಡಿತ ಉನ್ನತ ಮಾರ್ಗದತ್ತ ಕೊಂಡೊಯ್ಯಲು ಸಾಧ್ಯವಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಬಸವರಾಜ ಸಾದರ ಅಭಿಪ್ರಾಯಪಟ್ಟರು.

ನಗರದ ರವೀಂದ್ರ ಕಲಾನಿಕೇತನದಲ್ಲಿ ಡಾ.ಪ್ರದೀಪಕುಮಾರ ಹೆಬ್ರಿ ವಿರಚಿತ ಯುಗಾವತಾರಿ ಶ್ರೀ ಬಸವದರ್ಶನ ಮಹಾಕಾವ್ಯ ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ನಮ್ಮ ಸಮಾಜದಲ್ಲಿ ಎಲ್ಲರೂ ಒಂದೆ ಎಂಬ ಮನೋಭಾವ ಬರುವವರೆಗೆ ಸಾಮಾಜಿಕ ಅನಿಷ್ಟಗಳನ್ನು ದೂರ ಮಾಡಲು ಸಾಧ್ಯವಾಗುವುದಿಲ್ಲ. ಭ್ರಷ್ಟಾಚಾರದಂತಹ ಹಲವು ವಿಷಯಗಳ ವಿರುದ್ಧ ಸ್ವಾಮೀಜಿಗಳೂ ಸಹ ಹೋರಾಟಕ್ಕಿಳಿಯಬೇಕು. ಇದಕ್ಕಾಗಿ ಜಾತಿಯತೆಯನ್ನು ಬಿಟ್ಟು ಹೊರಬರಬೇಕು. ಆಗ ಮಾತ್ರ ಮಠಮಾನ್ಯಗಳಿಗೆ ಇರುವ ಶಕ್ತಿ ಏನು ಎಂಬುದು ಗೊತ್ತಾಗುತ್ತದೆ ಎಂದರು.

ನಮಗೆ ಜಾತಿ ಮುಖ್ಯವಾಗಬಾರದು. ಮನುಷ್ಯತ್ವ ಮುಖ್ಯವಾಗಬೇಕು. ಮನುಷ್ಯತ್ವದ ಪರಂಪರೆಯನ್ನು ಸಮಾಜದಲ್ಲಿ ನಿರ್ಮಾಣ ಮಾಡಬೇಕು. ಬಸವಣ್ಣನ ವಚನಗಳಲ್ಲಿ ಇರುವ ಆಶಯ ಮತ್ತು ಸಾರ ಇದೇ ಆಗಿದೆ. ನುಡಿ ಮತ್ತು ನಡೆಯೇ ಬದುಕು ಎಂದು ವಚನಗಳು ಸಾರುತ್ತವೆ. ಇದನ್ನು ಅನುಸರಿಸಿದವ ಶರಣನಾಗುತ್ತಾನೆ. ಬಸವಣ್ಣನನ್ನು ಅರ್ಥಮಾಡಿಕೊಳ್ಳಬೇಕಾದರೆ ವಚನಗಳನ್ನು ಓದಬೇಕು. ಸಮಾಜದ ಎಲ್ಲ ಕಾಲದ ಸಮಸ್ಯೆಗಳಿಗೆ 12ನೇ ಶತಮಾನದ ವಚನಗಳೇ ಪರಿಹಾರಾತ್ಮಕವಾಗಿ ನಿಲ್ಲುತ್ತವೆ. ವಚನಗಳಲ್ಲಿ ನೀತಿ ಮತ್ತು ಮೌಲ್ಯಗಳು ಕಂಡುಬರುತ್ತವೆ. ಆ ಮೌಲ್ಯಗಳು ವೈಜ್ಞಾನಿಕವಾಗಿವೆ. ವಚನಗಳಲ್ಲಿ ಕಂಡುಬರುವ ಅನೇಕ ನೀತಿಗಳನ್ನು ಕಾನೂನಾತ್ಮಕ ರೂಪದಲ್ಲಿಯೂ ಕಾಣಬಹುದಾಗಿದೆ. ಕಳಬೇಡ, ಕೊಲಬೇಡ ಎಂಬ >>> 4ನೇ ಪುಟಕ್ಕೆ

ಯುಗಾವತಾರಿ ಶ್ರೀ ಬಸವ ದರ್ಶನ ಮಹಾಕಾವ್ಯ ಕುರಿತ ವಿಚಾರ ಸಂಕಿರಣವನ್ನು ಯೋಗವನ ಬೆಟ್ಟದ ಶ್ರೀ ತಿಪ್ಪೇರುದ್ರಸ್ವಾಮಿ ಉದ್ಘಾಟಿಸಿದರು. ಡಾ.ಬಸವರಾಜ ಸಾದರ, ಡಾ.ಪ್ರದೀಪ್ ಕುಮಾರ ಹೆಬ್ರಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಶಿಕ್ಷಣ ತಜ್ಞ ಬಿ.ಎನ್.ಮಂಜುನಾಥ್ ಇನ್ನಿಲ್ಲ

ತುಮಕೂರು

ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಣ ತಜ್ಞ ಬಿ.ಎನ್.ಮಂಜುನಾಥ್ ಭಾನುವಾರ ಮಧ್ಯಾಹ್ನ ನಿಧನರಾಗಿದ್ದಾರೆ. ಇವರಿಗೆ 92 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಹೆಣ್ಣು ಮಕ್ಕಳು, ಪುತ್ರ ನಿವೃತ್ತ ಬ್ಯಾಂಕ್ ಅಧಿಕಾರಿ ಸೂರ್ಯನಾರಾಯಣ ಬುದ್ದಿರ್, ಸೇರಿದಂತೆ ಅಪಾರ ಸಂಖ್ಯೆಯ ಶಿಷ್ಯವೃಂದ, ಬಂಧು-ಬಳಗವನ್ನು ಅಗಲಿದ್ದಾರೆ.

ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗಳನ್ನು ಪಡೆದಿದ್ದ ಬಿ.ಎನ್.ಮಂಜುನಾಥ್, ರೈಲ್ವೆ ಸ್ಟೇಷನ್ ಬಳಿಯ ಗಾಂಧಿನಗರದ ನಿವಾಸದಲ್ಲಿ ವಾಸವಿದ್ದರು. ಉಡುಪಿ ಜಿಲ್ಲೆ ಕಡಲತೀರ ಗ್ರಾಮ ಬೀಜಾಡಿ ಗ್ರಾಮದಲ್ಲಿ 18.8.1925 ರಲ್ಲಿ ಜನಿಸಿದ ಇವರು, ತುಮಕೂರು ಹಾಗೂ ಬೆಂಗಳೂರಿನಲ್ಲಿ ವಿದ್ಯಾರ್ಜನೆ ಮಾಡಿದ್ದರು. 1946 ರಲ್ಲಿ ತುಮಕೂರು ಶ್ರೀ ಸಿದ್ದಗಂಗಾ ಪ್ರೌಢಶಾಲೆಯಲ್ಲಿ ಶಿಕ್ಷಕ ವೃತ್ತಿ ಪ್ರಾರಂಭಿಸಿ 1970 ರಲ್ಲಿ ಮುಖ್ಯೋಪಾಧ್ಯಾಯರಾಗಿ ಬಡ್ತಿ ಹೊಂದಿದ್ದರು. 1980 ರಲ್ಲಿ ಸೇವೆಯಿಂದ ನಿವೃತ್ತರಾದರೂ ಸಹ ವಿವಿಧ ರೀತಿಯ ಜನಪರ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು.

1976 ರಲ್ಲಿ ರಾಷ್ಟ್ರ ಪ್ರಶಸ್ತಿಗೆ ಆಯ್ಕೆಯಾಗಿ ರಾಷ್ಟ್ರಪತಿಗಳಿಂದ ಪ್ರಶಸ್ತಿ ಸ್ವೀಕರಿಸಿದ್ದರು. ಯುನೆಸ್ಕೋ ನಡೆಸಿದ ಏಷ್ಯಾದೇಶಗಳ ಶೈಕ್ಷಣಿಕ ನಾವಿನ್ಯ ಬೋಧನಾ ಕ್ರಮಗಳ ಅಭಿವೃದ್ಧಿ ಯೋಜನೆಗೆ >>> 4ನೇ ಪುಟಕ್ಕೆ

ಪ್ರಶಸ್ತಿಗಳು: ಭಾರತ ಸರ್ಕಾರದ ರಾಷ್ಟ್ರ ಪ್ರಶಸ್ತಿ, 4 ಬಾರಿ ಎನ್.ಸಿ.ಆರ್.ಟಿ. ರಾಷ್ಟ್ರ ಪ್ರಶಸ್ತಿ, 3 ಬಾರಿ ವಿಜ್ಞಾನ ರಾಷ್ಟ್ರೀಯ ಮೇಳದ ಪ್ರಶಸ್ತಿ, ರಂಭಾಪುರಿ ಶ್ರೀಗಳಿಂದ ಗುರುಭಕ್ತಿ ಭೂಷಣ ಪ್ರಶಸ್ತಿ, ರಾಜ್ಯ ನಿವೃತ್ತ ನೌಕರರ ಸಂಘದಿಂದ ಸೇವಾ ವಿಚಕ್ಷಣ ಪ್ರಶಸ್ತಿ, ಬೆಂಗಳೂರಿನ ಮೈತ್ರಿ ಸಮೂಹದಿಂದ ಶಿಕ್ಷಣ ರತ್ನ, ಅಂತರರಾಷ್ಟ್ರೀಯ ರೋಟರಿ ಅಧ್ಯಕ್ಷರಿಂದ ಸೈಟೇಷನ್ ಪ್ರಶಸ್ತಿ, ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಇವರಿಗೆ ಸಂದಿವೆ.

> ಪ್ರಜಾಪ್ರಗತಿ ದಿನಪತ್ರಿಕೆಯನ್ನು ಆರಂಭದ ದಿನಗಳಿಂದಲೂ ಪ್ರೀತಿಸುತ್ತಿದ್ದ ಮಂಜುನಾಥ್ ಅವರು ಆತ್ಮೀಯ ಓದುಗ ಬಳಗದಲ್ಲಿ ಒಬ್ಬರಾಗಿದ್ದರು. ನಗರದ ಹಲವು ಸಮಸ್ಯೆಗಳನ್ನು ಪತ್ರಿಕೆಯ ಮೂಲಕ ಬರೆದು ಸಮಸ್ಯೆಗಳಿಗೆ ಪರಿಹಾರ ಹುಡುಕಲು ಆಡಳಿತದ ಗಮನ ಸೆಳೆದಿದ್ದರು. ಇತ್ತೀಚಿನವರೆಗೂ ಓದುಗರ ಪತ್ರಗಳು ವಿಭಾಗದಲ್ಲಿ ಅವರ ಕೆಲವು ಅನಿಸಿಕೆಗಳು ಪ್ರಕಟವಾಗಿವೆ. ತುಮಕೂರಿನಲ್ಲಿ ನೀರಿನ ಸಮಸ್ಯೆ ಉಂಟಾದಾಗ ಮೈದಾಳ ಕೆರೆ ನೀರನ್ನು ಹರಿಸಲು ಕೆಲವರು ವಿರೋಧಿಸಿದಾಗ ಮೈದಾಳ ಕೆರೆ ನೀರು ಎಂದಿನಿಂದ ತುಮಕೂರಿಗೆ ಹರಿಯುತ್ತಿತ್ತು, ಕುಡಿಯುವ ನೀರಿನ ಇತಿಹಾಸವೇನು ಎಂಬುದನ್ನು ಸ್ವತಃ ಕೈಯಾರೆ ಬರೆದಿದ್ದರು. ಆ ಮೂಲಕ ಪತ್ರಿಕೆಯೊಂದಿಗೆ ನಿಕಟ ಒಡನಾಟ ಇಟ್ಟಕೊಂಡಿದ್ದರು.

ಗ್ರಾ.ಪಂ. ವ್ಯಾಪ್ತಿಯಲ್ಲಿ ಅನಧಿಕೃತ ಮನೆಗಳ ಮಾಲೀಕರೇ ಗಮನಿಸಿ..!

■ ಭೂಷಣ್ ಮಿಡಿಗೇಶಿ

ಸ್ವಂತ ಮನೆಯನ್ನು ಹೊಂದುವ ಕನಸು ಬಹುತೇಕ ಎಲ್ಲಾ ಮಾನವರಲ್ಲಿಯೂ ಇದ್ದದ್ದೇ..ಎಷ್ಟೋ ಜನ ತಮ್ಮ ಜೀವಿತಾವಧಿ ಪೂರ್ತಿ ಸ್ವಂತಕ್ಕೊಂದು ಮನೆಯಿಲ್ಲದೆ ಮಣ್ಣು ಸೇರುವುದೂ ಸಾಮಾನ್ಯವೇ..ಇಂತಹ ಕನಸಿಗೆ ಇಂಬು ಕೊಟ್ಟಂತೆ ಸಾಕಷ್ಟು ಸಂಖ್ಯೆಯ ಬಡಜನರು ತಮ್ಮ ಸ್ವಂತ ಜಾಗವಿಲ್ಲದೆ ಅನೇಕ ಬಾರಿ ಸರ್ಕಾರದ ಜಮೀನುಗಳಲ್ಲಿ, ಊರ ಮಗ್ಗುಲಿನ ಗ್ರಾಮಠಾಣಗಳಲ್ಲಿ ಅನಧಿಕೃತವಾಗಿ ತಮ್ಮ ಅವಶ್ಯಕತೆಗೆ ತಕ್ಕಂತೆ ನಿವೇಶನಗಳನ್ನು ಬಳಸಿಕೊಂಡಿರುತ್ತಾರೆ. ಮನೆಗಳನ್ನೂ ನಿರ್ಮಾಣ ಮಾಡಿಕೊಂಡಿರುತ್ತಾರೆ. ಆದರೆ ಅವರ ಹೆಸರಿನಲ್ಲಿ ಮ